# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 901

2) ಮಾನ್ಯ ಸದಸ್ಯರ ಹೆಸರು : ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು)

3) ಉತ್ತರಿಸುವ ದಿನಾಂಕ : 24.02.2022

4) ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪೊಲೀಸ್ ಇಲಾಖೆಯಲ್ಲಿ ಇರುವ ಹಿರಿಯ ಮತ್ತು ಕಿರಿಯ ಪೊಲೀಸ್ ಅಧಿಕಾರಿಗಳ ಅತಿಥಿ ಗೃಹಗಳ ಮತ್ತು ಸಂಶೋಧನಾ ಸಂಸ್ಥೆಗಳ ಸಂಖ್ಯೆ ಎಷ್ಟು? ಯಾವ ಯಾವ ಘಟಕಗಳಲ್ಲಿ ಯಾವ ಯಾವ ವರ್ಷ ನಿರ್ಮಾಣ ಮಾಡಲಾಗಿದೆ; ಸದರಿ ಕಟ್ಟಡಗಳನ್ನು ನಿರ್ಮಾಣ ಮಾಡಲು ಸರ್ಕಾರದ ಅನುಮತಿ ಪಡೆಯಲಾಗಿದೆಯೇ: (ದಾಖಲೆ ಒದಗಿಸುವುದು) ಸರ್ಕಾರದ ಅನುಮತಿ ಪಡೆಯದಿದ್ದಲ್ಲಿ ಪಡೆಯದಿರಲು ಕಾರಣವೇನು? ಸದರಿ ಕಟ್ಟಡ ನಿರ್ಮಿಸಲು ಸರ್ಕಾರದಿಂದ ಮತ್ತು ಇತರೆ ಯಾವ ಯಾವ ಮೂಲಗಳಿಂದ ಎಷ್ಟು ಹಣವನ್ನು ಪಡೆಯಲಾಗಿದೆ ಪಡೆಯಲಾದ ಹಣದಲ್ಲಿ ಎಷ್ಟು ಹಣವನ್ನು ಇದುವರೆಗೂ ಹಿಂದಿರುಗಿಸಲಾಗಿದೆ: ಬಾಕಿ ಇರುವ ಹಣವೆಷ್ಟು; | ಪೊಲೀಸ್ ಇಲಾಖೆಯಲ್ಲಿ ಒಟ್ಟು 38 ಅತಿಥಿ ಗೃಹಗಳು ಹಾಗೂ 02 ಸಂಶೋಧನಾ ಸಂಸ್ಥೆಗಳಿರುತ್ತದೆ.<br>ಹಾಗೂ 01 ಹಿರಿಯ ಪೊಲೀಸ್ ಅಧಿಕಾರಿಗಳ ಮೆಸ್ ಇದ್ದು ಪ್ರಸ್ತುತ ಇದನ್ನು ಸೀನಿಯರ್ ಪೊಲೀಸ್ ಆಫೀಸರ್ಸ್ ರೀಸರ್ಚ್ ಅಂಡ್ ಟ್ರೈನಿಂಗ್ ಇನ್ಸಿಟಿಟ್ಯೂಟ್ ಎಂದು ಮರುನಾಮಕರಣ ಮಾಡಲಾಗಿರುತ್ತದೆ.<br><br>ಘಟಕವಾರು ವಿವರವನ್ನು ಅನುಬಂಧ-ಎ ರಲ್ಲಿ ಲಗತ್ತಿಸಿದೆ. |
| ಆ) | ಕಮಾಂಡೆಂಟ್ 1ನೇ ಪಡೆ ರವರ ಅಧೀನದಲ್ಲಿರುವ ಹಿರಿಯ ಮತ್ತು ಕಿರಿಯ ಪೊಲೀಸ್ ಅಧಿಕಾರಿಗಳ ಅತಿಥಿ ಗೃಹಗಳ ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಸೇವೆಯಿಂದ ಅಮಾನತ್ತುಗೊಳಿಸಿ ಸಂಬಂಧಪಟ್ಟ ಸರಹದ್ದಿನ ಪೊಲೀಸ್ ಠಾಣೆಯಲ್ಲಿ ಅಪರಾಧ ಮೊಕ್ಕದ್ದಮೆ ಹೂಡದಿರಲು ಕಾರಣವೇನು: | ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಶ್ರೀ ಎನ್.ಎಸ್.ಪ್ರಕಾಶ್, ಸಹಾಯಕ ಕಮಾಂಡೆಂಟ್ 1ನೇ ಪಡೆ ಕೆಎಸ್ಆರ್‌ಪಿ, ಬೆಂಗಳೂರು ರವರ ವಿರುದ್ಧ ಸರ್ಕಾರದ ಆದೇಶ ಸಂಖ್ಯೆ ಹೆಚ್‌ಡಿ 101 ಪೊಸಿಪ 2021 ದಿ:20/1/2022ರಲ್ಲಿ ಕೆ.ಎಸ್.ಪಿ(ಡಿಪಿ) ನಿಯಮ 1965/89ರ ನಿಯಮ 6 ರನ್ವಯ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ಪ್ರಸ್ತುತ ಇಲಾಖೆ ವಿಚಾರಣೆ ಪ್ರಗತಿಯಲ್ಲಿದೆ.<br>ಇಲಾಖಾ ವಿಚಾರಣೆ ಮುಗಿದ ನಂತರ ಸಾಬಿತಾದ ಅಂಶಗಳ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| ಇ) | ಈ ಪ್ರಕರಣದಲ್ಲಿ ಆರೋಪಿಗಳ ಜೊತೆ ಸರ್ಕಾರದ ಅಧಿಕಾರಿಗಳೇನಾದರೂ ಕೈಜೋಡಿಸಿರುವರೇ: ಇತರೆ ವಸತಿ ಗೃಹಗಳ ನಿರ್ವಹಣೆಯಲ್ಲಿ ಬಂದಂತಹ ಲಾಭದ ಹಣವೆಷ್ಟು, ಸದರಿ ಹಣವನ್ನು ಸರ್ಕಾರಿ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲಾಗಿದೆಯೇ: (ವಿವರಗಳನ್ನು ನೀಡುವುದು) | ಇಲ್ಲ.<br>ಕಿರಿಯ ಪೊಲೀಸ್ ಅಧಿಕಾರಿಗಳ ಮೆಸ್ ಮತ್ತು ಸಂಶೋಧಾನ ಕೇಂದ್ರ ನಿರ್ವಹಣೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆ ಯಾಗಿರುವುದಿಲ್ಲ.<br>1) ಕಿರಿಯ ಪೊಲೀಸ್ ಅಧಿಕಾರಿಗಳ ಮೆಸ್‌ನ ಪ್ರಾರಂಭದಿಂದ ಫೆಬ್ರವರಿ–2022ರ ಮಾಹೆಯವರೆಗೆ ಬಂದಂತಹ ಆದಾಯದಲ್ಲಿ ರೂ 67,59,951/–ಗಳ ಪೈಕಿ ರೂ 54,35,537/–ಗಳನ್ನು ಎಸ್.ಬಿ.ಐ. ಹಾಗೂ ಕೆನರಾ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿಯನ್ನ ಹಾಗೂ ರೂ 13,25,414/–ಗಳ ಹಣ ಕೆನರಾ ಬ್ಯಾಂಕ್‌ನ ಪ್ರೆಸಿಡೆಂಟ್/ಕಮಾಂಡೆಂಟ್ ಜಿಪಿಓ ಮೆಸ್ ರವರ ಉಳಿತಾಯ ಖಾತೆಯಲ್ಲಿ ಜಮಾ ಮಾಡಲಾಗಿರುತ್ತದೆ.<br>2) ಕೆ.ಎಸ್.ಆರ್.ಪಿ. ತರಬೇತಿ ಮತ್ತು ಸಂಶೋಧನಾ ಕೇಂದ್ರದ ಆದಾಯವನ್ನು The Secretary ksrp Research and training center,<br><br>ಯುನಿಯನ್ ಬ್ಯಾಂಕ್‌ನ ಖಾತೆಯಲ್ಲಿ ರೂ 26,91,918/–ಗಳನ್ನು ದಿನಾಂಕ: 25/2/2022 ರವರೆಗೆ ಜಮಾ ಮಾಡಲಾಗಿರುತ್ತದೆ. |
| ಈ) | ಆರ್ಥಿಕ ಗೃಹಗಳ ಮತ್ತು ಕ್ಯಾಂಟೀನ್ ನಿರ್ವಹಣೆಯ ಹಣವನ್ನು ಮತ್ತು ಇಲಾಖೆಯ ಜಮೀನಿನಲ್ಲಿರುವ ತೆಂಗಿನ ಮರ, ಮಾವಿನ ಮರ ಹಾಗೂ ಹಲಸಿನ ಮರಗಳ ಫಸಲನ್ನು ಕಳೆದ 05 ವರ್ಷದ ಅವಧಿಯಲ್ಲಿ ಯಾವ ಯಾವ ದಿನಾಂಕದಂದು ಟೆಂಡರ್ ಮೂಲಕ ಹರಾಜು ಮಾಡಲಾಗಿದೆ: ಟೆಂಡರನಲ್ಲಿ ಭಾಗವಹಿಸಿದ ಟೆಂಡರ್‌ದಾರರು ಯಾರು ಯಾರು(ಸಂಪೂರ್ಣ ದಾಖಲೆಯೊಂದಿಗೆ ವಿವರ ನೀಡುವುದು) | 2019,2020 ಮತ್ತು 2021ರ ಸಾಲಿನಲ್ಲಿ ಮಾತ್ರ ತೆಂಗಿನ ಫಸಲನ್ನು ಸಮಿತಿ ರಚಿಸಿ, ಹರಾಜು ಮಾಡಲಾಗಿರುತ್ತದೆ. |
| ಉ) | ಕಮಾಂಡೆಂಟ್ 1ನೇ ಪಡೆಯಲ್ಲಿ ಲಕ್ಷಾಂತರ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಮೇಲ್ಕಂಡ ಎಲ್ಲಾ ವ್ಯವಹಾರಗಳ ಹಣವನ್ನು ನಿರ್ವಾಹಣಾಧಿಕಾರಿಗಳು ಮತ್ತು ಸಿಬ್ಬಂದಿಗಳು ತಮ್ಮ ವೈಯಕ್ತಿಕ ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಂಡಿರುವುದರಿಂದ ಸರ್ಕಾರದ ಹಣ ಮತ್ತು ಅಧಿಕಾರ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ. |

**ಸಂಖ್ಯೆ:ಹೆಚ್‌ಡಿ 25 ಪಿಬಿಎಲ್ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು

## ಅನುಬಂಧ-'ಎ'

| ಕ್ರಸಂ | ಘಟಕ | ಅತಿಥಿಗೃಹ/ಸಂಶೋಧನ ಸಂಸ್ಥೆಗಳ ಸಂಖ್ಯೆ | ನಿರ್ಮಾಣವಾದ ವರ್ಷ/ ಸರ್ಕಾರದ ಅನಮತಿ | ಅನುದಾನ ಪಡೆದಿರುವ ಬಗ್ಗೆ ವಿವರ |
|---|---|---|---|---|
| 1. | ಪೊಲೀಸ್ ಆಯುಕ್ತರು, ಬೆಂಗಳೂರು ನಗರ | 01 ಹಿರಿಯ ಪೊಲೀಸ್ ಅಧಿಕಾರಿಗಳ ಮೆಸ್<br><br>02 ಅತಿಥಿ ಗೃಹ | 1973 ನಿರ್ಮಾಣವಾದ ವರ್ಷ ಸೀನಿಯರ್ ಆಫೀಸರ್ಸ್ ಮೆಸ್ ಕಟ್ಟಡ ನಿರ್ಮಾಣ ಕುರಿತು ಯಾವುದೇ ದಾಖಲೆ ಲಭ್ಯವಿರುವುದಿಲ್ಲ. ಆದರೆ ಸದರಿ ಕಟ್ಟಡವನ್ನು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 07 ಪಿಓಪಿ 2019 ದಿ:6/8/2020 ರ ಆದೇಶದಂತೆ ಸೀನಿಯರ್ ಪೊಲೀಸ್ ಆಫೀಸರ್ಸ್ ರೀಸರ್ಚ್ ಅಂಡ್ ಟ್ರೈನಿಂಗ್ ಇನ್ಸಿಟಿಟ್ಯೂಟ್ ಎಂದು ಮರುನಾಮಕರಣ ಮಾಡಲಾಗಿರುತ್ತದೆ. ಮರುನಾಮಕರಣಗೊಂಡ ರೀಸರ್ಚ್ ಸೆಂಟರ್‌ನ ನಿರ್ವಹಣೆಗೆ ಸರ್ಕಾರದಿಂದ ರೂ.150.00 ಲಕ್ಷಗಳ ಬಿಡುಗಡೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. | 1973ರಲ್ಲಿ ನಿರ್ಮಾಣವಾಗಿದ್ದು ಯಾವ ಮೂಲದಿಂದ ಅನುದಾನ ಪಡೆದಿರುವ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ. |
| 2. | ಪೊಲೀಸ್ ಆಯುಕ್ತರು, ಮೈಸೂರು ನಗರ | 01 ಸಂಶೋಧನ ಸಂಸ್ಥೆ | ಸಂಶೋಧನಾ ಕೇಂದ್ರವನ್ನು 2016ನೇ ಸಾಲಿನಲ್ಲಿ ನಿರ್ಮಾಣ ಮಾಡಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 134 ಇಎಫ್‌ಎಸ್ 2013 ಬೆಂಗಳೂರು 1/10/2013ರ ರೀತ್ಯ ಸರ್ಕಾರದ ವತಿಯಿಂದ ಅನುಮೋದನೆ ಪಡೆಯಲಾಗಿದೆ. | ಸರ್ಕಾರದ ಅನುದಾನದಲ್ಲೇ ನಿರ್ಮಾಣವಾಗಿದೆ. |
| 3. | ಪೊಲೀಸ್ ಆಯುಕ್ತರು, ಹುಬ್ಬಳ್ಳಿ-ಧಾರವಾಡ ನಗರ | 03 ಅತಿಥಿ ಗೃಹ | 25/5/2001 8/11/1970 ಮತ್ತು 8/4/1997ರಲ್ಲಿ ನಿರ್ಮಾಣ ಮಾಡಲಾಗಿರುತ್ತದೆ.<br>ಸರ್ಕಾರದ ಅನುಮತಿ ಪಡೆದಿರುವ ಬಗ್ಗೆ ದಾಖಲೆ ಲಭ್ಯವಿಲ್ಲ | ದಾಖಲೆ ಲಭ್ಯವಿಲ್ಲ |
| 4. | ಪೊಲೀಸ್ ಅಧೀಕ್ಷಕರು ಧಾರವಾಡ ಜಿಲ್ಲೆ | 01 ಅತಿಥಿ ಗೃಹ | 1996-97ರಲ್ಲಿ ನಿರ್ಮಾಣ ಸರ್ಕಾರದಿಂದ ಅನುಮತಿ ಪಡೆದಿರುವುದಿಲ್ಲ | ಘಟಕದ ಪೊಲೀಸ್ ಸಿಬ್ಬಂದಿಗಳ ಶ್ರಮದಾನದಿಂದ ನಿರ್ಮಾಣ ಮಾಡಲಾಗಿದೆ. |
| 5. | ಪೊಲೀಸ್ ಅಧೀಕ್ಷಕರು | 02 ಅತಿಥಿ ಗೃಹ | 1982 ಮತ್ತು 1997ರಲ್ಲಿ ನಿರ್ಮಾಣವಾಗಿರುತ್ತದೆ. | ಯಾವುದೇ ಮಾಹಿತಿ ಲಭ್ಯವಿಲ್ಲ |

| | | | | |
|---|---|---|---|---|
| | ಕಲಬುರಗಿ ಜಿಲ್ಲೆ | | ಸರ್ಕಾರದ ಅನುಮತಿ ಪಡೆದಿರುವ ಬಗ್ಗೆ ದಾಖಲೆ ಲಭ್ಯವಿಲ್ಲ | |
| 6. | ಪೊಲೀಸ್ ಅಧೀಕ್ಷಕರು ಮೈಸೂರು ಜಿಲ್ಲೆ | 02 ಅತಿಥಿ ಗೃಹ | ಕಿರಿಯ ಅತಿಥಿ ಗೃಹ ದ:4/9/1980 ಹಿರಿಯ ಅತಿಥಿ ಗೃಹ ದಿ:18/7/2003ರಲ್ಲಿ ನಿರ್ಮಾಣ ಮಾಡಲಾಗಿದ್ದು, ಈ ಹಿಂದೆ ಕಟ್ಟಡವನ್ನು ಅತಿಥಿ ಗೃಹಗಳಾಗಿ ಪರಿವರ್ತಿಸಲಾಗಿದೆ. | ಯಾವ ಮೂಲದಿಂದ ಅನುದಾನ ಪಡೆದಿರುವ ಬಗ್ಗೆ ಮಾಹಿತಿ/ದಾಖಲೆಗಳು ಲಭ್ಯವಿಲ್ಲ |
| 7. | ಪೊಲೀಸ್ ಅಧೀಕ್ಷಕರು ದಕ್ಷಿಣ ಕನ್ನಡ ಜಿಲ್ಲೆ | 01ಅತಿಥಿ ಗೃಹ | 1988ರಲ್ಲಿ ನಿರ್ಮಾಣವಾಗಿದೆ ಸರ್ಕಾದಿಂದ ಅನುಮತಿ ಪಡೆಯಲಾಗಿದೆ | ದೇಣಿಗೆ ಮತ್ತು ವಲಯ ಘಟಕದ ಕ್ಷೇಮನಿಧಿಯಿಂದ ಹಣ ಪಡೆದು ನಿರ್ಮಾಣ ಮಾಡಲಗಿರುತ್ತದೆ. |
| 8. | ಪೊಲೀಸ್ ಅಧೀಕ್ಷಕರು ಉತ್ತರ ಕನ್ನಡ, ಕಾರವಾರ | 01ಅತಿಥಿ ಗೃಹ | 1938ರಲ್ಲ ನಿರ್ಮಾಣವಾಗಿದ್ದು ಯಾವುದೇ ಮಾಹಿತಿ ಲಭ್ಯವಿಲ್ಲ | ಯಾವುದೇ ಮಾಹಿತಿ ಲಭ್ಯವಿಲ್ಲ |
| 9. | ಪೊಲೀಸ್ ಅಧೀಕ್ಷಕರು, ಕೊಡಗು ಜಿಲ್ಲೆ ಮಡಿಕೇರಿ | 02ಅತಿಥಿ ಗೃಹ | 1998-99ರಲ್ಲಿ ನಿರ್ಮಾಣಮಾಡಲಾಗಿದ್ದು ಸರ್ಕಾರದಿಂದ ಘಟನ್ನೋತ್ತರ ಅನುಮತಿ ಪಡೆಯಾಗಿರುತ್ತದೆ. | ಸಮುದಾಯ ಭವನದ ಅನುದಾನದಲ್ಲೇ ನಿರ್ಮಾಣ ಮಾಡಲಾಗಿದೆ. |
| 10. | ಪೊಲೀಸ್ ಅಧೀಕ್ಷಕರು, ರಾಯಚೂರು | 01ಅತಿಥಿ ಗೃಹ | 1966ರಲ್ಲಿ ನಿರ್ಮಾಣವಾಗಿದ್ದು ಯಾವುದೇ ಮಾಹಿತಿ ಲಭ್ಯವಿಲ್ಲ | ಯಾವುದೇ ಮಾಹಿತಿ ಲಭ್ಯವಿಲ |
| 11. | ಪೊಲೀಸ್ ಅಧೀಕ್ಷಕರು, ಶಿವಮೊಗ್ಗ | 01ಅತಿಥಿ ಗೃಹ | ಸರ್ಕಾರದ ಅನುಮತಿ ಪಡೆದಿರುವುದಿಲ್ಲ | ಸಾರ್ವಜನಿಕ ವಂತಿಕೆಯಿಂದ ನಿರ್ಮಾಣವಾಗಿರುತ್ತದೆ |
| 12. | ಪೊಲೀಸ್ ಅಧೀಕ್ಷಕರು, ಹಾವೇರಿ ಜಿಲ್ಲೆ | 02ಅತಿಥಿ ಗೃಹ | ವಸತಿ ಗೃಹಗಳನ್ನು ಅತಿಥಿ ಗೃಹಗಳಾಗಿ ಪರಿವರ್ತಿಸಲಾಗಿದೆ | ಯಾವುದೇ ಮೂದಿಂದ ಅನುದಾನ ಪಡೆದಿರುವುದಿಲ್ಲ |
| 13. | ಪೊಲೀಸ್ ಅಧೀಕ್ಷಕರು, ಚಿಕ್ಕಮಂಗಳೂರು ಜಿಲ್ಲೆ | 01ಅತಿಥಿ ಗೃಹ | 1968 ದಿ:20/11/1968 | ಯಾವುದೇ ಮಾಹಿತಿ/ದಾಖಲೆ ಲಭ್ಯವಿಲ್ಲ |
| 14. | ಪೊಲೀಸ್ ಅಧೀಕ್ಷಕರು, ಗದಗ ಜಿಲ್ಲೆ | 01ಅತಿಥಿ ಗೃಹ | 2003 ಸರ್ಕಾರದಿಂದ ಅನುಮತಿ ಪಡೆದಿಲ್ಲ. | ಸಾರ್ವಜನಿಕ ವಂತಿಕೆಯಿಂದ ನಿರ್ಮಾಣವಾಗಿರುತ್ತದೆ |
| 15. | ಪೊಲೀಸ್ ಅಧೀಕ್ಷಕರು, ಬಾಗಲಕೋಟೆ ಜಿಲ್ಲೆ, | 02ಅತಿಥಿ ಗೃಹ | 2009 ಸರ್ಕಾರದಿಂದ ಅನುಮತಿ ಪಡೆದಿಲ್ಲ. | ಕೆಆರ್‌ಐಡಿಎಲ್, ಸ್ಥಳೀಯ ಶಾಸಕರ ಸಂಸದೀಯ ನಿಧಿ ಯಿಂದ ನಿರ್ಮಾಣವಾಗಿದೆ. |

| | | | | |
|---|---|---|---|---|
| 16. | ಪೊಲೀಸ್ ಅಧೀಕ್ಷಕರು, ಬೀದರ್ ಜಿಲ್ಲೆ | 02ಅತಿಥಿ ಗೃಹ | 2001 ಸರ್ಕಾರದಿಂದ ಅನುಮತಿ ಪಡೆದಿಲ್ಲ. | ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ಮಂಡಳ ಕಲಬುರಗಿ ಮತ್ತು ಎಂ.ಪಿ ಲ್ಯಾಂಡ್ ನಿಧಿಯಿಂದ ನಿರ್ಮಾಣವಾಗಿದೆ. |
| 17. | ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು | 03ಅತಿಥಿ ಗೃಹ | 2003,2001 ಮತ್ತು 2009ರಲ್ಲಿ ಸರ್ಕಾರದ ವತಿಯಿಂದಲೇ ಅತಿಥಿ ಗೃಹ ನಿರ್ಮಾಣವಾಗಿರುತ್ತದೆ. | ಸರ್ಕಾರದ ಅನುದಾನದಲ್ಲೇ ನಿರ್ಮಾಣವಾಗಿದೆ. |
| 18. | ಕಮಾಂಡೆಂಟ್ 9ನೇ ಪಡೆ, ಕೆಎಸ್‌ಆರ್‌ಪಿ, ಬೆಂಗಳೂರು | 01ಅತಿಥಿ ಗೃಹ | 2009-10 ನಿರ್ಮಾಣ | ಸರ್ಕಾರದ ರೂ.10.00 ಲಕ್ಷಗಳ ಅನುದಾನದಲ್ಲೇ ನಿರ್ಮಾಣ ಮಾಡಲಾಗಿರುತ್ತದೆ. |
| 19. | ಕಮಾಂಡೆಂಟ್, 5ನೇ ಪಡೆ ಕೆಎಸ್‌ಆರ್‌ಪಿ, ಮೈಸೂರು | 09ಅತಿಥಿ ಗೃಹ | ವಸತಿ ಗೃಹಗಳನ್ನು ಅತಿಥಿ ಗೃಹಗಳಾಗಿ ಪರಿವರ್ತಿಸಲಾಗಿದೆ | ಯಾವುದೇ ಮೂದಿಂದ ಅನುದಾನ ಪಡೆದಿರುವುದಿಲ್ಲ |
| 20. | ಕಮಾಂಡೆಂಟ್,1ನೇ ಪಡೆ, ಕೆಎಸ್‌ಆರ್‌ಪಿ, ಬೆಂಗಳೂರು | 01 ಅತಿಥಿ ಗೃಹ/ 01 ಸಂಶೋಧನ ಸಂಸ್ಥೆ | ಕಿರಿಯ ಅತಿಥಿ ಗೃಹ 1979 ಮತ್ತು 2005 ರಲ್ಲಿ ನಿರ್ಮಾಣವಾಗಿದೆ.<br>ಸಂಶೋಧನಾ ಸಂಸ್ಥೆ 2010 ರಲ್ಲಿ ನಿರ್ಮಾಣವಾಗಿದೆ. | ಸರ್ಕಾರದಿಂದ ಇತರೆ ಮೂಲದಿಂದ ಅನುದಾನ ಪಡೆದಿರುವ ಬಗ್ಗೆ ಮಾಹಿತಿ ಲಭ್ಯವಿಲ್ಲ.<br>1ನೇ ಪಡೆ ಕೆಎಸ್‌ಆರ್‌ಪಿ, ಬೆಂಗಳೂರಿನಲ್ಲಿ ಸಂಶೋಧನಾ ಸಂಸ್ಥೆ ನಿರ್ಮಾಣಕ್ಕೆ ಎಲ್ಲಾ ಪಡೆಗಳಿಂದ ಒಟ್ಟು ರೂ.22,00,000/-ಗಳನ್ನು ಪಡೆದಿದ್ದು, ಸದರಿ ಮೊತ್ತವನ್ನು ಹಿಂದಿರುಗಿಸಲಾಗಿರುತ್ತದೆ. |